ಯುವ ವೇದಿಕೆ

# ವಿವೇಕಾನಂದರು ಬಯಸಿದ ಯುವಶಕ್ತಿ!

ಪೊನ್ನಂಪೇಟೆಯ ಶ್ರೀರಾಮಕೃಷ್ಣ ಶಾರದಾಶ್ರಮದ ಅಧ್ಯಕ್ಷರಾದ ಸ್ವಾಮಿ ಪುರುಷೋತ್ತಮಾನಂದಜಿಯವರು ಯುವಕರಿಗೆ ಮಾರ್ಗದರ್ಶನ ನೀಡುವ ಹಲವು ಗ್ರಂಥಗಳನ್ನು ರಚಿಸಿರುವರು. ಪ್ರಸ್ತುತ ಲೇಖನದಲ್ಲಿ ಸ್ವಾಮಿ ವಿವೇಕಾನಂದರು ಯುವಕರನ್ನುದ್ದೇಶಿಸಿ ಹೇಳಿದ ಮಾತುಗಳನ್ನು ಚರ್ಚಿಸಿರುವರು.

ಸ್ವಾಮಿ ಪುರುಷೋತ್ತಮಾನಂದ

## ಕಾಯಶಕ್ತಿ ವಿವೇಚನಾ ಶಕ್ತಿಗಳ ಮಿಲನ

ಯುವಶಕ್ತಿ ಎಂಬುದೊಂದಿದೆ. ಅದೊಂದು ಅಸಾಮಾನ್ಯ ಶಕ್ತಿ. ಅದನ್ನು ಸಂಘಟಿಸಿ ಸದುಪಯೋಗಪಡಿಸಿಕೊಳ್ಳುವ ತಂತ್ರ ಬಲ್ಲವರಿದ್ದರೆ ಅದರ ಮೂಲಕ ಮಹತ್ತರವಾದುದನ್ನು ಸಾಧಿಸಬಹುದು ಎಂಬ ಸತ್ಯವನ್ನು ಕಂಡುಹಿಡಿದವರು ಸ್ವಾಮಿ ವಿವೇಕಾನಂದರು. ಸ್ವಯಂ ಅವರೂ ಕೂಡ ತಮ್ಮ ಚಿಕ್ಕ ಜೌವನದ ಅವಧಿಯಲ್ಲೇ ಮಹೋನ್ನತ ಕಾರ್ಯಗಳನ್ನು ಸಾಧಿಸಿ ತೋರಿಸಿದ್ದವರು. ಅಲ್ಲದೆ ಮುಂದಿನ ಯುವ ಪೀಳಿಗೆಗೆ ತಾವೇ ಒಂದು ಮಾದರಿಯಾಗಿ ನಿಂದವರು.

ವಯಸ್ಕರಲ್ಲಿ ವಿವೇಚನಾ ಶಕ್ತಿಯಿದೆ, ಜೀವನಾನುಭವವಿದೆ. ಆದರೆ ಕಾರ್ಯವೆಸಗಲು ಬೇಕಾದ ಕಾಯಶಕ್ತಿ ಸಾಲದು. ಯುವಕರಲ್ಲಿ ಅಪಾರ ಕಾಯಶಕ್ತಿಯೂ ಇದೆ, ಅದಮ್ಯ ಉತ್ಸಾಹವೂ ಇದೆ. ಆದರೆ ವಿವೇಚನಾಶಕ್ತಿ, ಮುಂದಾಲೋಚನೆ ಸಾಲದು. ಆದ್ದರಿಂದ ಯುವಕರ ಕಾಯಶಕ್ತಿಯೊಂದಿಗೆ ವಯಸ್ಕರ ವಿವೇಚನಾಶಕ್ತಿಯನ್ನು ಮೇಳೈಸುವ ಜಾಣ್ಮೆಯಲ್ಲೇ ಜಯದ ರಹಸ್ಯವಿರುವುದು.

ಯುವಕರ ಕಾಯಶಕ್ತಿಯೊಂದಿಗೆ ವಯಸ್ಕರ ವಿವೇಚನಾಶಕ್ತಿಯನ್ನು ಮೇಳೈಸುವ ಜಾಣ್ಮೆಯಲ್ಲೇ ಜಯದ ರಹಸ್ಯವಿರುವುದು.

ಆದರೆ ವಯಸ್ಸಾದವರೆಲ್ಲರಲ್ಲೂ ಏಕಪ್ರಕಾರವಾಗಿ ವಿವೇಚನಾ ಶಕ್ತಿ ಉದಿಸಿರುತ್ತದೆ ಎಂದುಕೊಳ್ಳುವಂತಿಲ್ಲ ಎಂಬ ಕಟು ಸತ್ಯವೊಂದು ನಮ್ಮ ಮುಂದೆಯೇ ಇದೆ. ವಯಸ್ಕರೆಲ್ಲರಿಗೂ ವಿವೇಚನಾಶಕ್ತಿಯಿರುತ್ತದ್ದರೆ ಅವರು ತಮ್ಮ ಸಂತಾನರೇ ಆದ ಯುವಕರ ಕಾಯಶಕ್ತಿಯನ್ನೂ ಉತ್ಸಾಹಶಕ್ತಿಯನ್ನೂ ಉಪಯೋಗಿಸಿಕೊಂಡು ನಮ್ಮ ರಾಷ್ಟ್ರವನ್ನು ಎಂದೆಂದಿಗೂ ಸ್ವತಂತ್ರ ಹಾಗೂ ಸಶಕ್ತವಾಗಿಯೇ ಉಳಿಸಿಕೊಂಡಿರಬಹುದಾಗಿತ್ತು. ಆದರೆ ಆದದ್ದೇನು? ನೂರಾರು ವರ್ಷಗಳ ಕ್ಷುದ್ರ ದಾಸ್ಯದಲ್ಲಿ ರಾಷ್ಟ್ರಕ್ಕೆ ರಾಷ್ಟ್ರವೇ ನರಳುವಂತಾಯಿತು.

ಆದ್ದರಿಂದ ವಿವೇಚನಾಶಕ್ತಿಯುಳ್ಳ ವಯಸ್ಕರು ಕಾಯಶಕ್ತಿಯಿಂದ ಪುಟಿಯುವ ಯುವಕರನ್ನು ಸನ್ಮಾರ್ಗದಲ್ಲಿ ನಡೆಸಿ ವಿವೇಕಿಗಳನ್ನಾಗಿಸಿ ಮೌಲ್ಯಪೂರ್ಣವಾದ ಸ್ವತಂತ್ರ ರಾಷ್ಟ್ರವನ್ನು ರೂಪಿಸುವಲ್ಲಿ ಮುಂದಾಗಬೇಕು. ಹೀಗೆ ಮಾಡಿದಲ್ಲಿ ಮಾತ್ರವೇ ವಯಸ್ಕರ ವಿವೇಚನಾ ಶಕ್ತಿಯೂ ಸಾರ್ಥಕ, ಯುವಕರ ಕಾಯಶಕ್ತಿಯೂ ಸಾರ್ಥಕ.

## ಯುವಕರು ಹೇಗಿರಬೇಕು?

ಚಿರಯುವಕರಾದ ವಿವೇಕಾನಂದರು ತಮ್ಮ ಅಪೂರ್ವ ವಿವೇಕದ ಮೂಲಕ ಮಾಡಿದ ಕಾರ್ಯವೇ ಅದು— ಯುವಕರಿಗೆ ಮಾರ್ಗದರ್ಶನ!

ವಿವೇಕಾನಂದರ ದೃಷ್ಟಿಯಲ್ಲಿ ಯುವಕರೆಂದರೆ ಯಾರು? ೧೬ ವರ್ಷದಿಂದ ೩೦ ವರ್ಷದ ಒಳಗಿನವರಾಗಿಬಿಟ್ಟರೆ ಅವರೆಲ್ಲ ಯುವಕರೆಂದೆ? ಖಂಡಿತ ಅಲ್ಲ. ಅವರ ಕಲ್ಪನೆ ಯುವಕರು ಆಶಿಷ್ಠರೂ ಬಲಿಷ್ಠರೂ ಧೃಢಿಷ್ಠರೂ ಆಗಿರಬೇಕು. ಅವರೆನ್ನುತ್ತಾರೆ, 'ನಮಗಿಂದು ಕಬ್ಬಿಣದಂಥ ಮಾಂಸಖಂಡ, ಉಕ್ಕಿನಂಥ ನರಮಂಡಲ ಹಾಗೂ ವಿದ್ಯುಚ್ಛಕ್ತಿಯಂಥ ಮನೋಬಲವುಳ್ಳ ಯುವಕರು ಬೇಕು. ಇವರು ಶಾಂತರೂ, ಸೂಕ್ಷ್ಮಮತಿಗಳೂ, ಪ್ರಾಮಾಣಿಕರೂ, ಕಾಮಕಾಂಚನ, ಹೆಸರು-ಕೀರ್ತಿಗಳ ಹುಚ್ಚಿಲ್ಲದವರೂ ಆಗಿರಬೇಕು.' ಎಂದು. ಕಬ್ಬಿಣದಂಥ ಮಾಂಸಖಂಡ

ಹಾಗೂ ಉಕ್ಕಿನಂಥ ನರಮಂಡಲದ ಕಲ್ಪನೆಯನ್ನು ಬಹುಶಃ ಯಾವೊಬ್ಬ ಸೇನಾನಾಯಕನೂ ನಮ್ಮ ಮುಂದಿಟ್ಟಿಲ್ಲ. ಹಾಗೆಯೇ ಯುವಕನ ಇಚ್ಛಾಶಕ್ತಿಯು ವಿದ್ಯುತ್ತಿನ ತೇಜಸ್ಸಿನಂತೆ, ತೀಕ್ಷ್ಣತೆಯಂತೆ, ವೇಗಶಾಲಿಯಾಗಿರಬೇಕೆಂಬ ಅವರ ಕಲ್ಪನೆಯೂ ನಮ್ಮನ್ನು ಬೆರಗುಗೊಳಿಸದಿರಲಾರದು.

## ಇಂದಿನ ವಿದ್ಯಾರ್ಥಿಗಳ ಸ್ಥಿತಿ

ಅವರು ವಿದ್ಯಾರ್ಥಿಗಳ ಹಾಗೂ ವಿದ್ಯಾಭ್ಯಾಸ ಪದ್ಧತಿಯ ಕುರಿತು ಹೇಳುತ್ತ ಹೀಗೆನ್ನುತ್ತಾರೆ:

'ಆಧುನಿಕ ವಿದ್ಯಾರ್ಥಿಗಳು ಕಾರ್ಯಶೀಲರಾಗಿಲ್ಲ. ಅವರು ನಿಸ್ಸಹಾಯಕರಂತಿದ್ದಾರೆ. ಇಂದಿನ ಇಂಗ್ಲಿಷ್ ವಿದ್ಯಾಭ್ಯಾಸ ಪದ್ಧತಿಯು ಕೇವಲ ಪುಸ್ತಕ ಜ್ಞಾನವನ್ನು ನೀಡುತ್ತದೆ, ಅಷ್ಟೆ. ನಮ್ಮ ವಿದ್ಯಾರ್ಥಿಗಳಿಗೆ ಕುಶಲಕಲೆಗಳನ್ನೂ ಕೈಗೆಲಸಗಳನ್ನೂ ಬೋಧಿಸಲಾಗುತ್ತಿಲ್ಲ. ಆದ್ದರಿಂದ ಅವರಿಗೆ ತಮ್ಮ ಕಂಗಳನ್ನು ಕರಗಳನ್ನು ಬಳಸುವುದು ಹೇಗೆಂಬುದೇ ತಿಳಿಯದು. ತಾವೇ ಸ್ವತಃ ಆಲೋಚಿಸುವುದು ಹೇಗೆ ಮತ್ತು ತಂತಮ್ಮ ಕಾಲಮೇಲೆ ನಿಂತು ಸ್ವಾವಲಂಬಿಗಳಾಗುವುದು ಹೇಗೆ ಎಂಬುದನ್ನೆಲ್ಲ ಅವರಿಗೆ ತಿಳಿಸಿಕೊಡಬೇಕು.....

'ಎರಡನೆಯದಾಗಿ, ಇಂದು ಲಕ್ಷಾಂತರ ವಿದ್ಯಾರ್ಥಿಗಳು ತುಂಬ ಕಳಪೆಯ ಆಹಾರದ ಮೇಲೆ ಜೀವಿಸುತ್ತಿದ್ದಾರೆ. ಇದು ಅತ್ಯಂತ ಶೋಚನೀಯ ಸಂಗತಿ. ಮಕ್ಕಳ ಭವಿಷ್ಯದ ಆರೋಗ್ಯವು ಅವರ ಬಾಲ್ಯದ ಆರೋಗ್ಯವನ್ನು ಅವಲಂಬಿಸಿದೆ ಎನ್ನುವುದನ್ನೇ ಜನರು ಮರೆತಿದ್ದಾರೆ, ಅಥವಾ ಅರಿತೇ ಇಲ್ಲ. ಆದ್ದರಿಂದ ಮಕ್ಕಳಿಗೆ ಸಾಧ್ಯವಾದಷ್ಟೂ ಪೌಷ್ಟಿಕ ಆಹಾರ ನೀಡುವ ಅಭ್ಯಾಸ ಬೆಳೆಯಬೇಕು.....

'ಮೂರನೆಯದಾಗಿ, ನಮ್ಮಲ್ಲಿ ಶೀಲ-ಚಾರಿತ್ರ್ಯ ಕಣ್ಮರೆಯಾಗುತ್ತಿದೆ. ವಿದ್ಯಾರ್ಥಿಗಳು ಸಭ್ಯನಡತೆ-ಸದ್ವರ್ತನೆಗಳನ್ನೇ ಮರೆತುಬಿಡುತ್ತಿದ್ದಾರೆ. ಈಗೀಗಂತೂ ಸಭ್ಯವಾಗಿ ಮಾತನಾಡುವುದೆಲ್ಲ ಗೌರವಕ್ಕೆ ಕಡಮೆ ಎಂಬ ಮನೋಭಾವ ಬೆಳೆಯುತ್ತಿದೆ! ಹಿರಿಯರಿಗೆ ವಿಧೇಯರಾಗಿರುವುದೆಂದರೆ ಅವಮಾನಕರವೆಂದೇ ತಿಳಿಯಲಾಗುತ್ತಿದೆ! ಅವಿಧೇಯತೆಯೇ ಸ್ವಾತಂತ್ರ್ಯದ ಲಕ್ಷಣವೆಂಬಂತಾಗಿದೆ! ಇರಲಿ, ಹೀಗಿದ್ದರೂ ನಾನೇನೂ ಹತಾಶನಾಗಿಲ್ಲ. ನನ್ನ ಜನಾಂಗದ ಮೇಲೆ ನಾನು ಅಭಿಮಾನವಿಟ್ಟುಕೊಂಡಿದ್ದೇನೆ. ಪ್ರತಿದಿನವೂ ದಿವ್ಯ ಭವಿಷ್ಯವೊಂದರ ಚಿತ್ರವನ್ನು ಮುಂಗಾಣುತ್ತಿದ್ದೇನೆ....'

ವಿವೇಕಾನಂದರು ನೂರು ವರ್ಷಗಳ ಹಿಂದೆಯೇ ಹೇಳಿದ ಮಾತುಗಳಿವು— 'ಆಧುನಿಕ ವಿದ್ಯಾರ್ಥಿಗಳು ಕಾರ್ಯಶೀಲರಾಗಿಲ್ಲ... ಇಂದಿನ ಇಂಗ್ಲಿಷ್ ವಿದ್ಯಾಭ್ಯಾಸ ಪದ್ಧತಿಯು ಕೇವಲ ಪುಸ್ತಕ ಜ್ಞಾನವನ್ನು ನೀಡುತ್ತದೆ, ಅಷ್ಟೆ,' ಎಂದು. ಕಾರ್ಯಶೀಲರಲ್ಲದವರು ಯಶಸ್ವೀ ಜೀವನ ನಡೆಸಲು ಹೇಗೆ ತಾನೆ ಸಾಧ್ಯ?

ಲಕ್ಷಾಂತರ ವಿದ್ಯಾರ್ಥಿಗಳು ಸಾಕಷ್ಟು ಪೌಷ್ಟಿಕಾಂಶವಿಲ್ಲದ ಕಳಪೆ ಆಹಾರದ ಮೇಲೆ ಜೀವಿಸುವ ಹಾಗೂ ಮಕ್ಕಳ ಭವಿಷ್ಯದ ಆರೋಗ್ಯವು ಅವರ ಬಾಲ್ಯದ ಆರೋಗ್ಯವನ್ನು ಅವಲಂಬಿಸಿದೆ ಎನ್ನುವ ಸತ್ಯಾಂಶವನ್ನು ವಿವೇಕಾನಂದರು ಅಂದೇ ಗುರುತಿಸಿ ಜನರಿಗೆ ತೋರಿಸಿಕೊಟ್ಟಿದ್ದರು ಎಂಬುದನ್ನು ಭಾವಿಸಿ ನೋಡಬೇಕು! ಬಲಿಷ್ಠವಾದ ಯುವಸಂತಾನದ ನಿರ್ಮಾಣವಾಗಬೇಕಾದರೆ ಅವರ ಬಾಲ್ಯದ ಬೆಳವಣಿಗೆಯ ಕಾಲದಲ್ಲೇ ತಯಾರಿ ಕೊಡಬೇಕೆಂಬ ಅವರ ಸಲಹೆ ಎಷ್ಟು ಮನನೀಯ!

> **ಬಲಿಷ್ಠವಾದ ಯುವಸಂತಾನದ ನಿರ್ಮಾಣವಾಗಬೇಕಾದರೆ ಅವರ ಬಾಲ್ಯದ ಬೆಳವಣಿಗೆಯ ಕಾಲದಲ್ಲೇ ತಯಾರಿ ಕೊಡಬೇಕು**

ಇನ್ನು, ವಿದ್ಯಾರ್ಥಿಗಳಲ್ಲಿ ಶೀಲ-ಚಾರಿತ್ರ್ಯ-ಸಭ್ಯತೆ-ಸದ್ವರ್ತನೆಗಳು ಕಣ್ಮರೆಯಾಗುತ್ತಿರುವುದು ಇಂದು ಮಾತ್ರವಲ್ಲ ನೂರು ವರ್ಷಗಳಿಂದಲೂ ಅವು ಅವನತಿ ಹೊಂದುತ್ತಲೇ ಇವೆ ಎಂಬ ಅಂಶವೂ ವಿವೇಕಾನಂದರ ಮಾತಿನಿಂದ ಸ್ಪಷ್ಟವಾಗುತ್ತದೆ. ಅವರು, ಶ್ರೇಷ್ಠಗುಣಮಟ್ಟವುಳ್ಳ ಯುವ ಸಂತಾನದ ನಿರ್ಮಾಣಕ್ಕೆ ಸಚ್ಚಾರಿತ್ರ್ಯವನ್ನು ದೊರಕಿಸಿಕೊಡುವ ವಿದ್ಯಾಭ್ಯಾಸವೇ ಆಗಬೇಕು ಮತ್ತು ಈ ಸಚ್ಚಾರಿತ್ರ್ಯದ ಸೌರಭಪೂರ್ಣ ವ್ಯಕ್ತಿತ್ವದ ಬೆಳವಣಿಗೆಯು ವಿದ್ಯಾರ್ಥಿದೆಸೆಯಿಂದಲೇ ಆಗಬೇಕು ಎಂದು ಅಂದೇ ನಿರ್ದೇಶಿಸಿ ದ್ದಾರೆ. ಆದರೆ ಇಂದು ನೀತಿನಿಯಮಗಳ ವಿಷಯದಲ್ಲಿ ಸ್ವಲ್ಪವೂ ತಲೆ ಕೆಡಿಸಿಕೊಳ್ಳದ, ಅವುಗಳತ್ತ ಕಣ್ಣೆತ್ತಿಯೂ ನೋಡದ ಕೋಟಿಕೋಟಿ ಜನ ದೇಶದಲ್ಲಿ ಈಶರಂತೆ ಮೆರೆದಾಡುವುದನ್ನು ಕಂಡು ಯುವಪೀಳಿಗೆಯು ತಬ್ಬಿಬ್ಬಾಗಿದೆ. ಧಾರ್ಮಿಕರು, ವಿದ್ಯಾವಂತರು, ಗಣ್ಯರು, ಅಧಿಕಾರಿಗಳು ಎನ್ನಿಸಿಕೊಂಡವರೇ ಅರಿಷಡ್ವರ್ಗಗಳಿಗೆ ಅಧೀನರಾಗಿ ವರ್ತಿಸುತ್ತಿರುವುದು ಕಾಣುತ್ತಿರುವಾಗ ಈ ನೈತಿಕತೆಯೆಂಬುದೆಲ್ಲ ಗೊಡ್ಡು ಧರ್ಮಿಷ್ಠರ ಶುಷ್ಕ ಉಪದೇಶಗಳಷ್ಟೆ ಎಂದು ತಿಳಿಯುವ ಸ್ಥಿತಿಗೆ ಬಂದಿದೆ ಯುವಜನತೆ! ಅನೈತಿಕತೆಯಿಂದುಂಟಾಗುವ ಅವ್ಯವಸ್ಥೆಗಳಷ್ಟೇ ಅಲ್ಲ ಅರಾಜಕತೆಯನ್ನೂ ಗಮನಿಸಿದಾಗ ವಿವೇಕಾನಂದರ ಉದ್ಬೋಧಕ ವಾಣಿಯ ಮಹತ್ವ ಅರಿವಿಗೆ ಬರುತ್ತದೆ.

## ಯುವಕರಲ್ಲಿರಬೇಕಾದ ಗುಣ

ಯುವಕರಲ್ಲಿ ಸ್ವಾಮಿ ವಿವೇಕಾನಂದರು ನಿರೀಕ್ಷಿಸುವುದೇನನ್ನು? ಅವರೆನ್ನುತ್ತಾರೆ:'ಮೊಟ್ಟ ಮೊದಲನೆಯದಾಗಿ ವಿಧೇಯತೆಯನ್ನು ಅಭ್ಯಸಿಸಿರಿ. ಪಾಶ್ಚಾತ್ಯರಾಷ್ಟ್ರಗಳಲ್ಲಿ ಉತ್ತುಂಗವಾದ ಸ್ವಾತಂತ್ರ್ಯಪ್ರಿಯತೆ ಇರುವಂತೆ ಅಷ್ಟೇ ಬಲವಾದ ವಿಧೇಯತೆಯ ಮನೋಭಾವವೂ ಇದೆ. ನಾವಾದರೋ, ನಮಗೆ ಹೇಳಬಲ್ಲವರು ಈ ಜಗತ್ತಿನಲ್ಲೇ ಹುಟ್ಟಿಲ್ಲ ಎಂಬ ಧೋರಣೆ ತಾಳಿರುವುದರಿಂದ ಏನನ್ನೂ ಸಾಧಿಸಲಾರದವರಾಗಿದ್ದೇವೆ! ಆದ್ದರಿಂದ ಓ ನನ್ನ ಯುವಕರೆ, ಅಗಾಧವಾದ ಕಾರ್ಯಶಕ್ತಿ, ಅಸೀಮ ಧೈರ್ಯ, ಅಪಾರ ಬಲ ಇವೆಲ್ಲಕ್ಕೂ ಹೆಚ್ಚಾಗಿ ಪರಿಪೂರ್ಣ ವಿಧೇಯತೆ—ಇವುಗಳೇ ವ್ಯಕ್ತಿಯ ಉದ್ಧಾರಕ್ಕೂ ರಾಷ್ಟ್ರದ ಪ್ರಗತಿಗೂ ಸಾಧಕ. ಇಂತಿಂಥ ಗುಣಗಳೆಲ್ಲ ನಮ್ಮಲ್ಲಿ ನಶಿಸಿಯೆ ಹೋಗಿವೆ. ಅವುಗಳನ್ನು ಊರ್ಜಿತಗೊಳಿಸಿಕೊಳ್ಳಬೇಕು.

'ನಮ್ಮ ರಾಷ್ಟ್ರದ ಸ್ವರೂಪವನ್ನೇ ನಾಶಗೈಯುತ್ತಿರುವ ಇನ್ನೊಂದು ವೈರಿಯೆಂದರೆ ಹೊಟ್ಟೆಕಿಚ್ಚು-ಅಸೂಯೆ-ಮಾತ್ಸರ್ಯ! ಗುಲಾಮ ಜನಾಂಗಕ್ಕೆ ಮಾತ್ರವೇ ಮೀಸಲಾದ ಗುಣ — ಈ ಮಾತ್ಸರ್ಯ. ಪ್ರಜೆಗಳಲ್ಲಿ ಈ ಮಾತ್ಸರ್ಯವು ಮನೆಮಾಡಿಕೊಂಡಿರುವವರೆಗೆ ಸರ್ವಶಕ್ತನಾದ ಪರಮಾತ್ಮನೂ ಈ ರಾಷ್ಟ್ರವನ್ನು ಉದ್ಧರಿಸಲಾರ. ಆದ್ದರಿಂದ ಮೊದಲು ಈ ಮಾತ್ಸರ್ಯವನ್ನು ಮಸಣಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಅದನ್ನು ಹೂತುಬಿಡಿ.

'ನಮ್ಮ ರಾಷ್ಟ್ರದಲ್ಲಿ ಆಗಬೇಕಾದ ಕಾರ್ಯಗಳು ಬಹಳಷ್ಟು ಇವೆ. ಆದರೆ.... ಆದರೇನು ಮಾಡುವುದು? ಸಾಧನಗಳ ಅಭಾವ. ನಮ್ಮವರಲ್ಲಿ ಬುದ್ಧಿಶಕ್ತಿಯೇನೋ ಬಹಳ ಇದೆ. ಆದರೆ ಕಾರ್ಯಗತಗೊಳಿಸುವ ಕೈಗಳಿಲ್ಲ! ವೇದಾಂತದ ದೊಡ್ಡ ದೊಡ್ಡ ತತ್ತ್ವಗಳೆಲ್ಲ ಇವೆ. ಆದರೆ ಅವುಗಳನ್ನು ಆಚರಣೆಯಲ್ಲಿ ತರಬಲ್ಲ ಶಕ್ತಿ ಮಾತ್ರ ನಮ್ಮಲ್ಲಿಲ್ಲ! ನಿಃಸ್ವಾರ್ಥ ಹಾಗೂ ನಿಷ್ಕಾಮಭಾವದಿಂದ ಕರ್ಮ ಮಾಡಬೇಕೆಂಬ ಅತಿಶ್ರೇಷ್ಠ ತತ್ತ್ವವನ್ನು ಬೋಧಿಸಲಾದದ್ದೇನೋ ಭಾರತದಲ್ಲೇ. ಆದರೆ, ನಿತ್ಯಜೀವನದಲ್ಲಿ ನಮ್ಮಷ್ಟು ಸ್ವಾರ್ಥಿಗಳೂ ಕ್ರೂರಿಗಳೂ ಹೃದಯಶೂನ್ಯರೂ ಬೇರೊಬ್ಬರಿಲ್ಲ! ನಮ್ಮೆಲ್ಲ ಗಮನವೂ ನಮ್ಮ ನಮ್ಮ ಮಾಂಸಲ ಶರೀರದ ಸೌಖ್ಯಗಳ ಕಡೆಗೇ ಹೊರತು ಆ ಸ್ವಾರ್ಥದ ಕೋಟೆಯಿಂದ ಹೊರಬಂದು ನೋಡುವ ಔದಾರ್ಯವೇ ಇಲ್ಲ! ಇಂತಿರುವವರು ಭಾರತವನ್ನು ಹೇಗೆ ತಾನೆ ಉದ್ಧರಿಸಿಯಾರು?

'ಭಾರತದಲ್ಲಿನ ಎಲ್ಲ ಅವ್ಯವಸ್ಥೆಗಳಿಗೆ, ಕೆಡುಕುಗಳಿಗೆ ದೀನ ದಲಿತರ ದುಃಸ್ಥಿತಿಯೇ ಕಾರಣ. ಪಾಶ್ಚಾತ್ಯ ದೇಶಗಳಲ್ಲಿ ಬಡವರೆಂಬವರು ದೆವ್ವ-ಪಿಶಾಚಿಗಳಂತೆ ವರ್ತಿಸುತ್ತಾರೆ. ಅವರಿಗೆ ಹೋಲಿಸಿದರೆ ನಮ್ಮ ಭಾರತದಲ್ಲಿ ದೀನದಲಿತರು ದೇವತೆಗಳಂತಿದ್ದಾರೆ. ಆದ್ದರಿಂದ ಇವರನ್ನು ದುಃಸ್ಥಿತಿಯಿಂದ ಮೇಲೆತ್ತುವುದು ಹೆಚ್ಚು ಸುಲಭ. ನಿಮ್ನವರ್ಗದ ನತದೃಷ್ಟರಿಗೆ ನೀವು ಮಾಡಬೇಕಾದ ಸೇವೆಯೆಂದರೆ ಅವರಿಗೆ ಸೂಕ್ತ ವಿದ್ಯಾಭ್ಯಾಸ ಕೊಡುವುದು;"ನೀವೂ ಎಲ್ಲರಂತೆ ಮನುಷ್ಯರೇ, ನೀವೂ ನಿಮಗೆ ಬೇಕಾದುದನ್ನು ಸಾಧಿಸಬಲ್ಲಿರಿ" ಎನ್ನುತ್ತ ಅವರು ಕಳೆದುಕೊಂಡಿರುವ ತಮ್ಮ ವ್ಯಕ್ತಿತ್ವವನ್ನು ಅರಳಿಸುವುದು— ಇದು ನೀವು ಮಾಡಬೇಕಾದ ಮಹತ್ಕಾರ್ಯ.

'ಯಾರನ್ನೂ ಟೀಕಿಸಲು ಹೋಗದಿರಿ. ನಿಮ್ಮ ತುಟಿಗಳು ಹೊಲಿದಿರಲಿ, ಹೃದಯ ತೆರೆದಿರಲಿ. ಕೇವಲ ದೇಶದ ಹಿತಕ್ಕಾಗಿ ಮಾತ್ರವಲ್ಲ, ಸಮಸ್ತ ವಿಶ್ವದ ಹಿತಕ್ಕಾಗಿ ದುಡಿಯಿರಿ. ಇಡೀ ವಿಶ್ವದ ಒಳಿತನ್ನು ಸಾಧಿಸುವ ಹೊಣೆಗಾರಿಕೆಯು ನಿಮ್ಮ ಹೆಗಲ ಮೇಲೆಯೇ ಇದೆ—ಎಂದು ನೀವು ಪ್ರತಿಯೊಬ್ಬರೂ ಭಾವಿಸಬೇಕು. ಮನೆಮನೆಗೂ ಹೋಗಿ ಮಾನವ ಬಂಧುಗಳಿಗೆ ಹೇಳಬೇಕು—ದೈವತ್ವವು ನಿಮ್ಮಲ್ಲಿಯೇ ಇದೆ, ಆದರದು ಸದ್ಯಕ್ಕೆ ಸುಪ್ತವಾಗಿದೆ. ಅದನ್ನು ವ್ಯಕ್ತಗೊಳಿಸಿಕೊಳ್ಳಬೇಕು.

'ಜನರಿಗೆ ಅವರಾಡುವ ಭಾಷೆಯಲ್ಲಿಯೇ ಶಿಕ್ಷಣ ಕೊಡಿ. ಅವರಿಗೆ ಜ್ಞಾನವನ್ನು ಕೊಡಿ. ಅಷ್ಟೇ ಸಾಲದು, ಅದಕ್ಕಿಂತ ಹೆಚ್ಚಿನದೊಂದು ಬೇಕು—ಅದೇ ಸಂಸ್ಕೃತಿ. ಅವರಿಗೆ ಸಂಸ್ಕೃತಿಯನ್ನು ಕೊಡಿ. ಕೆಳದರ್ಜೆಯ ಜನರು ಮೇಲೆದ್ದು ನಿಲ್ಲುವಂತಾಗಬೇಕಾದರೆ, ಮಾನಸಿಕ ತುಮುಲವಿಲ್ಲದಂತಾಗಬೇಕಾದರೆ, ಮೊದಲು ಅವರು ಉಚ್ಚವರ್ಗದವರ ಸಂಸ್ಕೃತಿಯನ್ನು ಕಲಿತು ಮೈಗೂಡಿಸಿಕೊಳ್ಳಬೇಕು. ಉನ್ನತ ವರ್ಗದವರನ್ನು ಕೆಳಗೆಳೆಯುವುದಲ್ಲ ಪರಿಹಾರೋಪಾಯ; ಬದಲಾಗಿ ನಿಮ್ನವರ್ಗದವರನ್ನು ಉನ್ನತವರ್ಗದವರ ಮಟ್ಟಕ್ಕೆ ಎತ್ತುವುದೇ ನಿಜವಾದ ಪರಿಹಾರೋಪಾಯ. ನಮ್ಮ ಶಾಸ್ತ್ರಗ್ರಂಥಗಳೆಲ್ಲೆಲ್ಲ ಹೇಳಿರುವುದು ಈ ಬಗೆಯ ಕಾರ್ಯಪ್ರಣಾಳಿಕೆಯನ್ನೇ.

'ನನ್ನ ನಂಬಿಕೆ, ಭರವಸೆಗಳೆಲ್ಲ ಇರುವುದು ಆಧುನಿಕ ಯುವ ಜನಾಂಗದಲ್ಲಿ. ನನ್ನ ಯೋಜನೆಗಳನ್ನು ಕಾರ್ಯಗತಗೊಳಿಸಬಲ್ಲವರು ಇರುವುದು ಈ ಯುವಜನಾಂಗದಲ್ಲಿ. ಈ ನನ್ನ ಸಿಂಹಗಳು ರಾಷ್ಟ್ರದ ಸಕಲ ಸಮಸ್ಯೆಗಳನ್ನೂ ಬಗೆಹರಿಸುವ ಕಾರ್ಯ ಮಾಡಲಿದ್ದಾರೆ. ಮುಂದೆ ಏನೇನಾಗಬೇಕು, ಏನೇನು ಮಾಡಬೇಕು ಎಂಬುದರ ರೂಪುರೇಷೆಯನ್ನು ಅವರ ಮುಂದಿಟ್ಟಿದ್ದೇನೆ ಮತ್ತು ಇದನ್ನು ತಯಾರಿಸಲು ನನ್ನ ಜೀವಿತವನ್ನೇ ಅರ್ಪಿಸಿದ್ದೇನೆ. ಈ ನನ್ನ ಭಾವನೆಗಳನ್ನು ಹೊತ್ತು ನನ್ನ ಪ್ರಿಯ ಯುವಜನರು ಊರಿಂದೂರಿಗೆ ತಿರುಗಲಿದ್ದಾರೆ. ಎಲ್ಲಿಯವರೆಗೆಂದರೆ, ಈ ನನ್ನ ಭಾವನೆಗಳು ಸಮಸ್ತ ಭಾರತವನ್ನು ಆವರಿಸುವವರೆಗೆ!'

ಹೀಗೆ ಹರಿಯುತ್ತದೆ ವಿವೇಕಾನಂದರ ವಿಚಾರಲಹರಿ. ಅವರ ಧೀರೋದಾತ್ತ ಹಾಗೂ ಮಾನವಮಂಗಲಕಾರೀ ಕಲ್ಪನೆಗಳನ್ನು ಕಾರ್ಯಗತಗೊಳಿಸುವ ವೀರ ಯುವಕರ ಸೇನೆಯೊಂದು ತಯಾರಾಗಬೇಕಾಗಿದೆ.

✡

## ಆಶ್ರಮದ ವಿಶೇಷ ಕಾರ್ಯಕ್ರಮಗಳು

### ಮೇ

| | | |
|---|---|---|
| 6 | ಶನಿವಾರ | ಶ್ರೀ ಬಸವ ಜಯಂತಿ |
| 6 | ಶನಿವಾರ | ಅಕ್ಷಯ ತೃತೀಯಾ |
| 8 | ಸೋಮವಾರ | ಶ್ರೀ ಶಂಕರ ಜಯಂತಿ |
| 8 | ಸೋಮವಾರ | ಶ್ರೀ ರಾಮಾನುಜ ಜಯಂತಿ |
| 18-21 | | ಭಕ್ತ ಸಮ್ಮೇಳನ |
| 18 | ಗುರುವಾರ | ಶ್ರೀ ಬುದ್ಧ ಜಯಂತಿ |

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ

## ತಿದ್ದುಪಡಿ

**ಮಾರ್ಚ್ ತಿಂಗಳ ಸಂಚಿಕೆಯ ಪುಟ ೧೯ರಲ್ಲಿ ಮುದ್ರಿತವಾದಂತೆ ಬೆಂಗಳೂರು ರಾಮಕೃಷ್ಣ ಮಠದ ಸ್ಥಾಪನೆಯ ವರ್ಷ ೧೯೧೯ ಅಲ್ಲ. ಸರಿಯಾದ ವರ್ಷ ೧೯೦೩. ಮುದ್ರಣ ದೋಷಕ್ಕಾಗಿ ಕ್ಷಮೆ ಕೋರುತ್ತೇವೆ.**